ಹದಿನೈದು ವರ್ಷದ ನನ್ನ ಮಗಳಿಗೆ ಈ ಕತೆ ಅಷ್ಟೊಂದು ಹಿಡಿಸಿದ್ದಲ್ಲಿ, ಕತೆಯೊಳಗಿನ ಒಳಸುರುಳಿಗಳನ್ನು ಇನ್ನೂ ಚೆನ್ನಾಗಿ ಅರಿಯಬಲ್ಲ ಹಿರಿಯ ಓದುಗರೂ ಮೆಚ್ಚುವರೆಂಬ ಧೈರ್ಯ ಹುಟ್ಟಿತು. ಕತೆ ಬರೆದು ಮುಗಿಸುವ ಹುಚ್ಚು ಹೆಚ್ಚಾಯಿತು. ಇದಾದ ಕೆಲವೆ ದಿನಗಳಲ್ಲಿ ನನ್ನ ಸಹೋದ್ಯೋಗಿ ಡಾ. ಉಮಾಶಂಕರ್ ಜೊತೆ ದಕ್ಷಿಣ ಆಫ್ರಿಕಾಗೆ ಒಂದು ಸಂಶೋಧನಾತ್ಮಕ ಅಧ್ಯಯನಕ್ಕೆಂದು ಹೋಗಿದ್ದಾಗ ಹತ್ತು ಸಂಜೆ ಮತ್ತು ರಾತ್ರಿಗಳಲ್ಲಿ ಸಮಯ ಒದಗಿಸಿಕೊಂಡು ಕಾದಂಬರಿಯ ಉಳಿದ ಭಾಗಗಳನ್ನು ಬರೆದು ಪೂರ್ಣಗೊಳಿಸಿದ್ದೆ.

## ನಾಗೇಶ ಹೆಗಡೆ ನೀಡಿದ ಮೋಕ್ಷ

ಎಲ್ಲವನ್ನೂ ಅನುಮಾನಿಸುವುದು, ಇತರರು ಪ್ರತಿಪಾದಿಸಿದ ವ್ಯಾಖ್ಯಾನಗಳಿಗೆ ಪರ್ಯಾಯಗಳನ್ನೂ ಹುಡುಕುವುದು ವಿಜ್ಞಾನ ಕಲಿಸುವ ವಿಚಿತ್ರ ಪಾಠ! ಅದರಂತೆ ಕಾದಂಬರಿ ಬರೆಯುವಾಗ, ನನ್ನ ಓದುಗರೂ ಅಂತದೇ ಪ್ರಶ್ನಾಕ್ರಿಯೆಯಲ್ಲಿ ತೊಡಗಿಕೊಳ್ಳಬಹುದು ಎಂಬ ಅನಿಸಿಕೆಯಿಂದ ಕತೆಯಲ್ಲಿನ ವಿವರಗಳಿಗೆ ಹಲವು ರೀತಿಯ ಉಲ್ಲೇಖಗಳನ್ನೂ, ಆಧಾರಗಳನ್ನೂ, ಪೂರಕ ಚಿತ್ರಗಳನ್ನೂ ಒದಗಿಸಿ ಬರೆದಿದ್ದೆ. ನನ್ನ ಅನೇಕ ವಿಜ್ಞಾನಿ ಸ್ನೇಹಿತರೇನೋ ಕಾದಂಬರಿಯನ್ನು ಓದಿ ಮೆಚ್ಚಿಕೊಂಡರು. ಆದರೆ ಕನ್ನಡದ ಸಾಹಿತ್ಯದಲ್ಲಿ ಅನುಭವವಿದ್ದ ಒಬ್ಬ ಹಿರಿಯ ಬರಹಗಾರರಿಗೆ ತೋರಿಸಿ ಅಭಿಪ್ರಾಯ ಕೇಳಿದಾಗ, 'ನಿಮ್ಮ ಕೃತಿ ಕಾದಂಬರಿ ಬರೆಯುವ ದಾಟಿಯಲ್ಲಿಲ್ಲ. ಚಿತ್ರಗಳು ಮತ್ತು ಉಲ್ಲೇಖಗಳಿಂದ ತುಂಬಿರುವುದರಿಂದ ಇದೊಂದು ಪ್ರಬಂಧದ ರೀತಿ ಕಾಣುತ್ತದೆ. ಅವು ಕತೆಯ ಓಘಕ್ಕೆ ಅಡ್ಡಿಯಾಗುತ್ತವೆ; ಹಾಗಾಗಿ ಅವೆಲ್ಲವನ್ನೂ ತೆಗೆದುಹಾಕಿ ಬರೆಯಿರಿ' ಎಂದರು. ವಿಜ್ಞಾನಿಯಾಗಿ ರೂಢಿಸಿಕೊಂಡಿದ್ದ ಆ ಶೈಲಿಯು ಕಾದಂಬರಿಯಲ್ಲಿನ ಚರ್ಚೆಗಳಿಗೆ, ತರ್ಕಗಳಿಗೆ ಅವಶ್ಯಕ ಎಂದು ನಂಬಿದ್ದೆನಾಗಿ, ಅದನ್ನು ಬದಲಾಯಿಸಲು ಮನಸಾಗಲಿಲ್ಲ. ಕೊನೆಗೆ ಕಾದಂಬರಿಯು ನನ್ನ ವಿದ್ಯಾರ್ಥಿಯೊಬ್ಬರ ಮೂಲಕ ನಾಗೇಶ ಹೆಗಡೆಯವರ ಕೈಸೇರಿದಾಗ ಅದಕ್ಕೆ ಮೋಕ್ಷ ಸಿಕ್ಕಿತ್ತು. ಕೈ ಸೇರಿದ ಕೆಲವೇ ದಿನಗಳಲ್ಲಿ ಅವರು ಕರೆ ಮಾಡಿ ಮೆಚ್ಚುಗೆ ತೋರಿ 'ಸುಧಾ'ದಲ್ಲಿ ಪ್ರಕಟಿಸುತ್ತೇನೆ ಎಂದಾಗ ನನಗೆ ಆಕಾಶ ಕೈಗೆ ಸಿಕ್ಕಿತ್ತು. ಹಾಗಾಗಿ ನಾಗೇಶ ಹೆಗಡೆಯವರ ಪ್ರೋತ್ಸಾಹದಿಂದಾಗಿ ನನ್ನ ಸಾಹಿತ್ಯ ಜೀವನ ಪ್ರಾರಂಭವಾಯಿತು ಎಂದರೆ ಅತಿಶಯೋಕ್ತಿಯಲ್ಲ. 'ಕನಕಮುಸುಕು'ವಿಗೂ ಮುನ್ನ, ಅದರ ಬೆನ್ನಲ್ಲಿಯೇ ರಚಿಸಿದ್ದ ನನ್ನ 'ಶಾಲಭಂಜಿಕೆ' ಕತೆಯನ್ನು ಪ್ರಕಟಿಸಿ ಕನ್ನಡದ ಓದುಗರಿಗೆ ಪರಿಚಯಿಸಿದರು.

## ಸೋಲಿಸಿ ಗೆಲಿಸಿದ ಶೈಲಿ

ಕನ್ನಡದ 'ರೆಜಿಮೆಂಟೆಡ್' ಸಾಹಿತಿಗಳಿಗೆ ಆ ಶೈಲಿಯು ಕಾದಂಬರಿ ರಚಿಸುವ ದಾಟಿಯಲ್ಲ ಎನಿಸಿದ್ದರ ಜೊತೆಗೆ, ಒಂದು ನಿಯತಕಾಲಿಕೆಯಂತೂ, ಬೆಂಗಳೂರಿನ ಕೆಂಪೇಗೌಡರ ಬಗ್ಗೆ ಬರೆದ 'ಇಮ್ಮಡಿ ಗೋಪುರಗಳು' ಕತೆಯನ್ನು ಹಿಂದಿರುಗಿಸಿತ್ತು. 'ಇದು ಅತ್ತ ಕತೆಯೂ ಅಲ್ಲ ಇತ್ತ ಚರಿತ್ರೆಯ ಬಗ್ಗೆ ಬರೆದ ಕೃತಿಯೂ ಅಲ್ಲ' ಎಂಬ ಯೋಚನೆಯಿಂದಿರಬೇಕು. ಅಂತೆಯೇ 'ಶಾಲಭಂಜಿಕೆ' ಮೊದಲು ಪ್ರಕಟವಾದಾಗ, 'ಅದೊಂದು ಚರಿತ್ರೆಯ ಬಗೆಗಿನ ಲೇಖನವೆಂದು ಭ್ರಮಿಸಿ ಮೊದಲ ಕಂತನ್ನು ಓದಲೇ ಇಲ್ಲ' ಎಂದು ಹಲವಾರು ಓದುಗರು ಕರೆಮಾಡಿ ಹೇಳಿದ್ದುಂಟು. ಆದರೆ ಮೊದಮೊದಲು ತಿರಸ್ಕೃತಗೊಂಡ ಈ ದ್ವಂದ್ವರೂಪದ ಶೈಲಿಯೇ ಕೊನೆಗೆ ಓದುಗರಿಗೆ ಅತ್ಯಂತ ಪ್ರಿಯವಾಗಿ ಕಂಡದ್ದು ವಿಚಿತ್ರ. ಹೊಸ ಪ್ರಯೋಗ ಮಾಡುವವರು